ಅವರಿಬ್ಬರೂ ಒಟ್ಟಾಗಿ ಹೋಗುತ್ತಿದ್ದುದು ಹಾಲು ತರಲು ಹೌದಾದರೂ ಬೆಳಗ್ಗಿನ ಜಾವದ ವಾಕಿಂಗೇ ಅದರ ಹಿಂದಿನ ಉದ್ದೇಶ. ಹೆಚ್ಚು ಹಾಲು ಮಾರಾಟವಾಗುವ ಬೂತಿಗೆ ಹೋದರೆ ಆವತ್ತಿನ ಫ್ರೆಶ್ ಹಾಲು ಸಿಗುತ್ತದೆಯೆಂಬ ನಂಬಿಕೆ ಅವರನ್ನು ಅರ್ಧ ಕಿಮೀ ದೂರದ ಬೂತಿಗೇ ಹೋಗಿ ಹಾಲು ಕೊಳ್ಳುವಂತೆ ಪ್ರೇರೇಪಿಸುತ್ತಿತ್ತು. ಜತೆಗೇ ವಾಕಿಂಗೂ ಮುಗಿಸಿದ ನೆಮ್ಮದಿ. ಮಳೆಗಾಲವಾಗಿದ್ದರೂ ಮಳೆಯಿಲ್ಲದೆ ವಿಪರೀತ ಸೆಖೆ. ಹತ್ತು ಹೆಜ್ಜೆ ಹಾಕುವಷ್ಟರಲ್ಲಿ ಬೆವರಿಳಿಯಲು ತೊಡಗಿತ್ತು. ರಾಯರು ತಮ್ಮ ಎಂದಿನ ಹಾಸ್ಯದ ಶೈಲಿಯಲ್ಲಿ, 'ನೋಡೇ, ಮಳೆಯಿಲ್ಲ ನೀರಿಲ್ಲ ಅಂತಿದ್ದಿಯಲ್ಲ, ಇಲ್ಲೆಲ್ಲ ಒಡ್ಡಲಿಕ್ಕೆ ಶುರುವಾಯಿತು' ಅಂದರು. ಬೆವರಲಾರಂಭಿಸಿದ್ದ ಲೀಲಕ್ಕ ಕೂಡ ಹೊದೆದಿದ್ದ ಶಾಲನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡರು. 'ಇವತ್ತಾದರೂ ಮಳೆ ಬಂದಿದ್ದರೆ ಸಾಕಿತ್ತು. ಹೂಗಿಡ, ಹಿತ್ತಲೆಲ್ಲ ಒಣಗಲಿಕ್ಕೆ ಆರಂಭವಾಗಿದೆ' ಎಂದು ಮನೆಯ ಮುಂದೆ ಜತನದಿಂದ ಬೆಳೆಸಿದ್ದ ಗಿಡಗಳು ಒಣಗುವುದನ್ನು ಸಹಿಸಲಾಗದೆ ಆವತ್ತೇ ಬೆಳಿಗ್ಗೆ ನೀರುಣಿಸಿದ್ದ ಲೀಲಕ್ಕ ದನಿಗೂಡಿಸಿದರು.

ಹಾಲು ಪಡೆದು ಹಿಂತಿರುಗಿ ಬರುತ್ತಿದ್ದಾಗ 'ಸಾರ್' ಅಂತ ಯಾರೋ ಕರೆದ ಹಾಗಾಯಿತು. ಇಬ್ಬರೂ ತಿರುಗಿ ನೋಡಿದರು. 'ಇಲ್ಲಿಂದ ಮೈನ್ ರೋಡಿಗೆ ಹೇಗೆ ಹೋಗೋದು?' ಹಿಂದಿನಿಂದ ಹತ್ತಿರಕ್ಕೆ ಬಂದಿದ್ದ ಹುಡುಗ ಕೇಳಿದ.

'ಹೀಗೇ ಹೋಗಿ, ಮತ್ತೆ ಎಡಕ್ಕೆ ತಿರುಗಿ' ಅಂದರು ರಾಯರು. ದೂರದಲ್ಲಿ ಬೈಕು ನಿಲ್ಲಿಸಿದ್ದ ಇನ್ನೊಬ್ಬನನ್ನು 'ಲೋ' ಎಂದು ಕರೆದು 'ಬಾರೋ ಹೀಗೇ ಹೋಗೋದು' ಅಂತ ಕೂಗಿ ಹೇಳಿದ.

ಬೈಕಿನವ ಹತ್ತಿರ ಬರುತ್ತಲೇ ಈತ ಕ್ಷಣಾರ್ಧದಲ್ಲಿ ಲೀಲಕ್ಕನ ಕುತ್ತಿಗೆಯಿಂದ ಕರಿಮಣಿ ಸರ ಎಳೆದು ಬೈಕು ಹತ್ತಿ ಕುಳಿತಿದ್ದ. ಬೈಕು ರೊಯ್ಯನೆ ಹೊರಟು ಹೋಗಿತ್ತು. ಲೀಲಕ್ಕ ಬೊಬ್ಬೆ ಹಾಕಿದರು. ರಾಯರು ಕೈಲಿದ್ದ ವಾಕಿಂಗ್ ಸ್ಟಿಕ್ ಬೀಸಿ ಒಗೆದರು. ಅವೆರಡೂ ಪ್ರಯೋಜನಕ್ಕೆ ಬರಲಿಲ್ಲ. 'ಬಡ್ಡಿ ನನ್ಮಕ್ಕಳು... ದಾರಿ ಕೇಳುವ ನೆಪದಲ್ಲಿ ಅವರು ಇದಕ್ಕೇ ಬಂದದ್ದು...' ಕ್ರೋಧದಿಂದ ನುಡಿದರು ರಾಯರು. ಏಕಾಯೇಕಿ ನಡೆದ ದಾಳಿಗೆ ತತ್ತರಿಸಿದ ಲೀಲಕ್ಕ ಕುಸಿದು ಕುಳಿತರು. ಅವರ ಕಣ್ಣಂಚಿನಿಂದ ಹನಿ ಹನಿ ಕಣ್ಣೀರು ಇಳಿಯಲಾರಂಭಿಸಿತ್ತು.

ಐದು ನಿಮಿಷಕ್ಕೂ ಹೆಚ್ಚು ಸಮಯ ಇಬ್ಬರೂ ಏನು ಮಾಡುವುದೆಂದು ತೋಚದೆ ಅಲ್ಲೇ ಇದ್ದರು.

'ಹೋದದ್ದು ಹೋಯಿತು. ಹೊಸಬರು ನಾವು... ಇಲ್ಲಿಯ ಪರಿಸ್ಥಿತಿ ಏನು ಅಂತ ಸರಿಯಾಗಿ ತಿಳಿಯುವವರೆಗೆ ಜಾಗ್ರತೆಯಾಗಿರಬೇಕು. ಏಳು, ಮನೆಗೆ ಹೋಗೋಣ' ಎಂದರು ರಾಯರು. ಲೀಲಕ್ಕ ದುಃಖದಲ್ಲಿ ಬಿಕ್ಕಳಿಸುತ್ತಲೇ ಎದ್ದು ಹೊರಟರು. 'ಬೇರೆ ಹೊಸತು ಕೊಂಡುಕೊಳ್ಳೋಣ ಬಿಡೇ... ಅದೂ ಹದಿನೈದು ಇಪ್ಪತ್ತು ವರ್ಷ ಹಳತಾಗಿ ಹೋಗಿತ್ತು' ರಾಯರು ಸಮಾಧಾನಿಸುವ ಪ್ರಯತ್ನ ಮಾಡಿದರು.

'ಹದಿನೈದು ವರ್ಷವಾ? ಮಗಳು ಹುಟ್ಟುವ ಮೊದಲು ಮಾಡಿಸಿದ್ದು. ಮೂವತ್ತು ವರ್ಷದ ಮೇಲಾಯ್ತು. ಆದರೂ ಚಿನ್ನ ಹಳತಾಗುವುದು ಅಂತ ಇದೆಯೇ? ಮೂರು ಪವನ್ ಅಂದ್ರೆ ಈಗ ಲಕ್ಷಕ್ಕೂ ಮೇಲಾಗುತ್ತೆ' ಪುನಃ ದುಃಖ ತಡೆಯಲಾಗದೆ ಸೆರಗು ಬಾಯಲ್ಲಿ ಕಚ್ಚಿಕೊಂಡು ಅತ್ತರು ಲೀಲಕ್ಕ.